ಅವರ ಮನಸ್ಸಿನ ಉದ್ದೇಶ ನಮಗೆ ಗೊತ್ತಿದೆ. ತಾವು ದಯವಾಡಿ ಅದಕ್ಕೆ ಅವಕಾಶ ಕೊಡಬೇಡಿ. ಎಲ್ಲರೂ ಈ ಸಭೆಯಲ್ಲಿ ಸರಿಯಾದ ವರ್ತನೆಯಿಂದ ನಡೆದುಕೊಳ್ಳೋಣ. ಬಹಳ ರಿಗ್ರೆಟ್‌ನಿಂದ ನಾನು ಈ ಮಾತನ್ನು ಹೇಳುತ್ತಿದ್ದೇನೆ. ಮನಸ್ಸು ತುಂಬಾ ನೊಂದು ಈ ಮಾತನ್ನು ಹೇಳುತ್ತಿದ್ದೇನೆ. ಅಧ್ಯಕ್ಷರ ರೂಲಿಂಗ್ ನಿಮಗೆ ಬೇಕಾಗಿಲ್ಲ, ನಿಯಮಾವಳಿಗಳು ಬೇಕಾಗಿಲ್ಲ. ನೀವು ಹೇಳಿದ ಹಾಗೆ ಉತ್ತರವನ್ನು ತರಿಸಿಕೊಡುತ್ತೇವೆಂದು ಹೇಳಿದರೂ ಅದು ಬೇಕಾಗಿಲ್ಲ. ಮತ್ತೆ ಮತ್ತೆ.. ಶ್ರೀ ಖಾರ್ಗೆ ಯವರು ಮುಖ್ಯ ಮಂತ್ರಿಗಳು ಉತ್ತರಕೊಡಬೇಕೆಂದು ಹೇಳುತ್ತಿದ್ದಾರೆ. ಶನಿವಾರ ಇದನ್ನು ತೆಗೆದುಕೊಳ್ಳಬಹುದೆಂದು ತಾವು ಹೇಳಿದ್ದೀರಿ, ಆದ್ದರಿಂದ ತಾವು ದಯವಾಡಿ ಈ ಸಭೆಯನ್ನು ನಡೆಸಲು ಅವಕಾಶ ಮಾಡಿ ಕೊಡಿ.

ಅಧ್ಯಕ್ಷರು.—ನಾನು ಈ ಪ್ರಶ್ನೆಗೆ ಶನಿವಾರ ಉತ್ತರವನ್ನು ಕೊಡಿಸುತ್ತೇನೆ. ಶನಿವಾರ ಈ ಪ್ರಶ್ನೆಯನ್ನು ತೆಗೆದುಕೊಳ್ಳೋಣ. ಇದು ನನ್ನ ಸೆಕೆಂಡ್ ರೂಲಿಂಗ್. ಈ ರೂಲಿಂಗ್‌ಗೆ ಮನ್ನಣೆ ಕೊಡುವುದಿಲ್ಲವೆಂದರೆ it amounts to contempt of the House.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ. – ಮಾತುಮಾತಿಗೆ ಈ ಸಭೆಯ ಕಾಲವನ್ನು ವಿನಾಕಾರಣ ಕಳೆಯುತ್ತೇವೆಂದು ಮಾನ್ಯ ಲಕ್ಷ್ಮೀಸಾಗರ್ ಅವರು ಹೇಳುತ್ತಿದ್ದಾರೆ. ಮಾನ್ಯ ಲಕ್ಷ್ಮೀಸಾಗರ್ ಅವರು ಎಷ್ಟು ಕಾಲ ತೆಗೆದುಕೊಂಡಿದ್ದಾರೆ ಅಷ್ಟನ್ನು ಯಾರೂ ತೆಗೆದುಕೊಂಡಿಲ್ಲ, ತಾವು ದಾಖಲಾತಿಯನ್ನು ತೆಗೆಸಿ ನೋಡಿ ಗೊತ್ತಾಗುತ್ತದೆ. ಇವರು ಮಾತನಾಡುವಷ್ಟು ಯಾರೂ ಮಾತನಾಡುವುದಿಲ್ಲ. ಇಲ್ಲಿ ನಾವು ಯಾರೂ ಕಾಲ ಕಳೆಯಲು ಬಂದಿಲ್ಲ.

ಅಧ್ಯಕ್ಷರು.—ಎಕ್ಸಾಮಿನ್ ಮಾಡುತ್ತೇನೆಂದು ಹೇಳಿದ್ದೆ ಈ ಪ್ರಶ್ನೆಯನ್ನು ಹೆಲ್ಡ್ ಓವರ್ ಮಾಡಿದ್ದೇನೆಂದು ಹೇಳಿದೆ. ಈಗ ಸೆಕೆಂಡ್ ರೂಲಿಂಗ್ ಕೊಟ್ಟಿದ್ದೇನೆ. ಮಾನ್ಯ ಮುಖ್ಯಮಂತ್ರಿಯವರು ಶನಿವಾರ ಉತ್ತರವನ್ನು ಕೊಡುತ್ತಾರೆ. This question has been deferred to Saturday morning. Please don't protest against the decision of the Speaker.

ಶ್ರೀ ಎಸ್. ಬಂಗಾರಪ್ಪ.—ತಾವು ರೂಲಿಂಗ್ ಕೊಟ್ಟಿದ್ದೀರಿ, ಸನ್ಮಾನ್ಯ ಮುಖ್ಯಮಂತ್ರಿಗಳಿಂದ ಶನಿವಾರ ಉತ್ತರವನ್ನು ಕೊಡಿಸುತ್ತೇನೆಂದು ಹೇಳಿದ್ದೀರಿ, ಸಂತೋಷ. ಶ್ರೀ ಲಕ್ಷ್ಮೀಸಾಗರ್ ಅವರು ಮರ್ಯಾದೇತರು ಎಂಬ ಮಾತನ್ನು ಹೇಳಿದ್ದಾರೆ. ಆ ಮಾತನ್ನು ಅವರು ಹಿಂದಕ್ಕೆ ತೆಗೆದುಕೊಳ್ಳಬೇಕು ಇಲ್ಲದಿದ್ದರೆ ನಾವು ಸಹ ಅವರನ್ನು ಏನೆಂದು ಕರೆಯಬೇಕಾಗುತ್ತದೆ ಎಂದರೆ ''ನೀವು ಮಹಾ ಮರ್ಯಾದೇತರು'' ಎಂದು.

(ಗೊಂದಲ)

SRI A. LAKSHMI SAGAR.—Very good.

ಅಧ್ಯಕ್ಷರು.—೨೨೪ ಜನರೂ ಬಹಳ ಉತ್ತಮರು, ಮರ್ಯಾದಸ್ಥರು, ಗೌರವಾನ್ವಿತರು ಎಂದು ನಾವು ತಿಳಿದುಕೊಂಡಿದ್ದೇವೆ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಮತ್ತು ಮರ್ಯಾದೆಯುತ...

(ಗೊಂದಲ)

ರಾಜ್ಯದಲ್ಲಿ ಬಸ್‌ಮಾರ್ಗಗಳ ರಾಷ್ಟ್ರೀಕರಣ

೧೩೭೭. ಶ್ರೀ ಜಿ. ರಾಜಗೌಡ (ಹನೂರು).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಈ ವರ್ಷ ಯಾವ ಯಾವ ಜಿಲ್ಲೆಯಲ್ಲಿ ಬಸ್‌ಮಾರ್ಗಗಳನ್ನು ರಾಷ್ಟ್ರೀಕರಣ ಮಾಡಲು ತೀರ್ಮಾನಿಸಲಾಗಿದೆ,

ಆ) ಇದಕ್ಕಾಗಿ ಎಷ್ಟು ಹೊಸ ವಾಹನಗಳನ್ನು ಖರೀದಿಸಲಾಗುವುದು,

ಇ) ಈ ಹೆಚ್ಚುವರಿ ವಾಹನಗಳಿಂದ ಸರ್ಕಾರಕ್ಕೆ ತಗಲುವ ವೆಚ್ಚವೆಷ್ಟು ?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಸಾರಿಗೆ ಸಚಿವರು).—

ಅ) ಚಿತ್ರದುರ್ಗ, ಕೋಲಾರ ಮತ್ತು ಮೈಸೂರು ಜಿಲ್ಲೆಗಳಲ್ಲಿನ ಬಸ್‌ಮಾರ್ಗಗಳನ್ನು ರಾಷ್ಟ್ರೀಕರಣಗೊಳಿಸುವ ಕರಡು ಯೋಜನೆಗಳನ್ನು ಪ್ರಕಟಿಸಲಾಗಿದೆ.

ಮೇಲಿನ ಕರಡು ಯೋಜನೆಗಳಿಗೆ ಸಂಬಂಧಿಸಿದಂತೆ ಬಂದಿರುವ ಆಕ್ಷೇಪಣೆಗಳು ಮತ್ತು ಆಹವಾಲುಗಳನ್ನು ವಿಚಾರಣೆ ನಡೆಸಿಯೇ ಒಂದು ತೀರ್ಮಾನಕ್ಕೆ ಬರಬೇಕಾಗಿದೆ.

ಆ) ೧೯೮೮-೮೯ರ ಸಾರಿಗೆ ಸಂಸ್ಥೆಯ ಅಂದಾಜು ಪಟ್ಟಿಯ ಪ್ರಕಾರ ಮೇಲಿನ ಉದ್ದೇಶಕ್ಕಾಗಿ ೪೭೦ ಬಸ್‌ಗಳನ್ನು ಕೊಳ್ಳಲು ಉದ್ದೇಶಿಸಲಾಗಿದೆ.

ಇ) ರಾಜ್ಯ ಸರ್ಕಾರಕ್ಕೆ ಯಾವ ವೆಚ್ಚವು ತಗಲುವುದಿಲ್ಲ.

ಶ್ರೀ ಜಿ. ರಾಜೂಗೌಡ.—ಕರಡು ಯೋಜನೆ ಪ್ರಕಾರ ಮೂರು ಜಿಲ್ಲೆಯಿಂದ ಎಷ್ಟು ರೂಟ್‌ಗಳನ್ನು ರಾಷ್ಟ್ರೀಕರಣ ಗೊಳಿಸಲಾಗಿದೆ ? ರಾಷ್ಟ್ರೀಕರಣ ಯೋಜನೆಯನ್ನು ಕಟ್ಟುನಿಟ್ಟಾಗಿ, ನಿರ್ದಿಷ್ಟವಾಗಿ, ಕರಾರುವಕ್ಕಾಗಿ ಯಾವಾಗ ಜಾರಿ ಮಾಡುತ್ತೀರಿ?

ಶ್ರೀ ಪಿ ಜಿ ಆರ್. ಸಿಂಧ್ಯಾ. ಕರಾರುವಕ್ಕಾಗಿ ನಿರ್ದಿಷ್ಟವಾಗಿ ಈಗ ನಾವು ಪ್ರಕಟಮಾಡಿರತಕ್ಕ ಕರಡು ಯೋಜನೆಗಳಿಗೆ ಆಕ್ಷೇಪಣೆಗಳನ್ನು ಕೇಳಬೇಕಾಗುತ್ತದೆ. ಅದನ್ನು ಕೇಳಿದ ನಂತರ ಈ ಒಂದು ಅಂತಿಮ ತೀರ್ಮಾನವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಜಿ. ರಾಜೂಗೌಡ.—೪೭೦ ಹೊಸ ಬಸ್‌ಗಳಲ್ಲಿ ಯಾವ ಯಾವ ಜಿಲ್ಲೆಗೆ ಎಷ್ಟೆಷ್ಟು ಬಸ್ಸುಗಳನ್ನು ಕೊಡುತ್ತೀರಿ ? ಹೆಚ್ಚಾದ ಪ್ರಯಾಣಿಕರ ಸಂಖ್ಯೆಯನ್ನು ನಿಗದಿ ಮಾಡಿ ೪೭೦ ಬಸ್‌ಗಳನ್ನು ತೆಗೆದು ಕೊಳ್ಳುತ್ತೀರಾ ? ಈ ೪೭೦ ವಾಹನಗಳಿಂದ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗೆ ಎಷ್ಟು ವೆಚ್ಚ ವಾಗುತ್ತದೆ ?

ಶ್ರೀ ಪಿ.ಜಿ ಆರ್. ಸಿಂಧ್ಯ —ಸಂಪೂರ್ಣ ವಿವರಗಳು ಬೇಕಾದಲ್ಲಿ ಈ ಸ್ಕೀಮ್ ಇಂಪ್ಲಿಮೆಂಟ್ ಆದಮೇಲೆ ಅಳದ ಡಿಟೇಲ್ಸ್ ಕೊಡುತ್ತೇನೆ. ಈಗ ಅವನ್ನೆಲ್ಲಾ ಕೊಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ಜಿ. ರಾಜೂಗೌಡ.—೧೯೮೮-೮೯ನೇ ಸಾಲಿನಲ್ಲಿ ಆಕ್ಷೇಪಣೆ ಬಂದ ನಂತರ ರಾಷ್ಟ್ರೀಕರಣ ಮಾಡುವುದಕ್ಕೆ ಕಾರ್ಯಕ್ರಮ ಹಾಕುತ್ತೀರಾ ಆಕ್ಷೇಪಣೆಗೆ ನಿಗಧಿಮಾಡಿರತಕ್ಕ ಕಾಲ ಎಷ್ಟು ? ಇದೆಲ್ಲಾ ಆದಮೇಲೆ ನಿರ್ದಿಷ್ಟವಾಗಿ ರಾಷ್ಟ್ರೀಕರಣ ಮಾಡುತ್ತೀರಾ ?

ಶ್ರೀ ಪಿ. ಜಿ. ಆರ್. ಸಿಂಧ್ಯ.—ಹೌದು.

ಶ್ರೀ ಎ. ಕೃಷ್ಣಪ್ಪ —ನನ್ನ ಪ್ರಶ್ನೆಗೆ ಅವಕಾಶವನ್ನೇ ಕೊಡಲಿಲ್ಲ.

ಅಧ್ಯಕ್ಷರು —ನಾನು ಕರೆಯಾಗ ನೀವು ಇರಲಿಲ್ಲ.

ಶ್ರೀ ಎ. ಕೃಷ್ಣಪ್ಪ.—ನಾನು ಇಲ್ಲೇ ಇದ್ದೇನೆ. ತಾವು ಕರೆಯಲಿಲ್ಲ.

ಅಧ್ಯಕ್ಷರು —ಆಯಿತು, ನಿಮಗೆ ಅವಕಾಶ ಕೊಡುತ್ತೇನೆ, ಕುಳಿತುಕೊಳ್ಳಿ. ಈಗ ಜ್ಞಾನದೇವ ದೊಡ್ಡ ಮೇಟಿಯವರ ಪ್ರಶ್ನೆ.

ಶ್ರೀ ಎ. ಕೃಷ್ಣಪ್ಪ.—ಯಾವಾಗ ಅವಕಾಶ ಕೊಡುವುದು ? ಊರಲ್ಲಾ ಕೊಳ್ಳಿಹೋದಮೆಲಾ?